**ದಿನಾಂಕಃ 14-2-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಶ್ರೀ ಎಸ್ ವಿ ಆರ್ ವಕೀಲರಿಂದ**

ಪ್ರತಿವಾದಿಯು ನನಗೆ ಮಗಳಾಗಬೇಕು, ಪ್ರತಿವಾದಿಯು ನನ್ನ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ನನ್ನ ಮಗಳು ವಾಸವಿರುವ ಮನೆ ಸ ನಂ 1ಃ2 , ಬಿ.ಅಚ್ಚಮನಹಳ್ಳಿ ಎಂದರೆ ಸಾಕ್ಷಿಯು ಅದನ್ನು ನನ್ನ ಮಗನಿಗೆ ಕೇಳಬೇಕು ಎಂದು ನುಡಿದಿರುತ್ತಾರೆ. ಪ್ರತಿವಾದಿಯು ನನ್ನ 5 ಗುಂಟೆ ಜಮೀನಿನಲ್ಲಿ ವಾಸವಿರುತ್ತಾರೆ.

ಪ್ರತಿವಾದಿಯು ವಾಸವಿರುವ ಮನೆಯ ಪೂರ್ವ ದಿಕ್ಕಿಗೆ ಶ್ರೀರಾಮರೆಡ್ಡಿಯವರ ಮನೆ ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ನನ್ನ ಮನೆ ಬರುತ್ತದೆ. ಉತ್ತರಕ್ಕೆ ರಸ್ತೆ ಬರುತ್ತದೆ , ದಕ್ಷಿಣಕ್ಕೆ ಏನು ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಯಾವ ಸ ನಂ ಗಾಗಿ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಎಷ್ಟು ವಿಸ್ತೀರ್ಣಕ್ಕಾಗಿ ಹಾಕಿರುತ್ತೇನೆ ಎಂದೂ ಸಹ ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಪ್ರತಿವಾದಿಯನ್ನು ನನ್ನ ಸ್ವತ್ತಿನಿಂದ ಹೊರಹಾಕಲು ಸಲ್ಲಿಸಿರುತ್ತೇನೆ ಎಂದರೆ ಸರಿ.

ನನಗೆ ಇಬ್ಬರು ಮಕ್ಕಳಿದ್ದು ಅವರುಗಳೆಂದರೆ ರಾಮಾಂಜಿ ಮತ್ತು ನಾಗಭೂಷಣ. ನನಗೆ ಗುಂಡ್ಲಹಳ್ಳಿಯಲ್ಲಿ ಜಮೀನಿದ್ದು ಅದರಲ್ಲಿ ಬಂದ ಬೆಳೆ ಮಾರಿ ಬಂದ ಹಣದಿಂದ ಈ ಸ್ವತ್ತನ್ನು ಖರೀದಿಸಿರುತ್ತೇನೆ. ಸುಮಾರು 10-12 ವರ್ಷಗಳ ಹಿಂದೆ ಈ ಜಮೀನನ್ನು ಖರೀದಿಸಿರುತ್ತೇನೆ. ಪ್ರತಿವಾದಿಯ ಮಗಳನ್ನೇ ನನ್ನ 2ನೇ ಮಗನಿಗೆಕೊಟ್ಟು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಹೆಬ್ಬೆಟ್ಟು ಮತ್ತು ನನ್ನ ಮಗನ ಸಹಿಯನ್ನು ನನಗೆ ಗುರುತು ಹಿಡಿಯಲು ಆಗುವುದಿಲ್ಲ, ನಾನು ಮತ್ತು ನನ್ನ ಗಂಡು ಮಕ್ಕಳು ಸೇರಿಕೊಂಡು ಪ್ರತಿವಾದಿಗೆ ರೂ. 30 ಸಾವಿರಕ್ಕೆ ದಾವಾ ಸ್ವತ್ತನ್ನು ಮಾರಿರುತ್ತೇನೆ ಎಂದರೆ ಸಾಕ್ಷಿಯು 15 ಸಾವಿರ ಸಾಲವನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ.

ನಾವು ಪ್ರತಿವಾದಿಗಳಿಂದ ರೂ. 30 ಸಾವಿರ ಪಡೆದು ಸ್ವತ್ತನ್ನು ಮಾರಿರುತ್ತೇವೆ ಎಂದರೆ ಸರಿಯಲ್ಲ, ಪ್ರತಿವಾದಿಗಳು ನನ್ನ ವಿರುದ್ಧ ಕ್ರಯಪತ್ರ ಮಾಡಿಕೊಡಲು ಒಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಕಂದಾಯ ದಾಖಲೆಗಳೆಲ್ಲವೂ ಪ್ರತಿವಾದಿಗಳ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಅಧಿಕಾರಿಗಳೊಂದಿಗೆ ಶಾಮೀಲಾಗಿ ಮಾಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ. ಕಂದಾಯವನ್ನು ಪ್ರತಿವಾದಿಗಳೇ ತುಂಬುತ್ತಿದ್ದಾರೆ ಎಂದರೆ ಸರಿಯಲ್ಲ, ಕರಾರು ಪತ್ರವನ್ನು ಮಾಡಿಕೊಡುವ ಕಾಲಕ್ಕೆ ಹನುಮಕ್ಕ, ವೆಂಕಟೇಶಪ್ಪ , ಶ್ರೀರಾಮರೆಡ್ಡಿ ಮತ್ತು ಪತ್ರ ಬರಹಗಾರರಾದ ಸಂಜೀವಪ್ಪನವರು ಹಾಜರಿದ್ದರು ಎಂದರೆ ಸಾಕ್ಷಿಯು ಪತ್ರಬರಹಗಾರರನ್ನು ಹೊರತುಪಡಿಸಿ ಬೇರೆ ಎಲ್ಲರೂ ಇದ್ದರು ಎಂದು ನುಡಿದಿರುತ್ತಾರೆ. ಕರಾರು ಪತ್ರವನ್ನು ಬರೆದವರು ಬೂಡ್ಡಿ ನಾರಾಯಣಪ್ಪ ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ನನ್ನ ಇಬ್ಬರು ಗಂಡು ಮಕ್ಕಳು ಹಾಜರಿದ್ದರು.

(ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ., ಪಾವಗಡ.**